# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ

ಸಿಸಿ ನಂಬರಃ 680/2023

ಫಿಯಾದಿಃ ಸರಕಾರ

- ವಿರುದ್ಧ -

ಆರೋಪಿಃ

2) ರಂಜೀತ ರಾಮಚಂದ್ರ ಪೂಜಾರಿ,
ವಯಃ 23 ವರ್ಷ, ಉಃ ಕೂಲಿ ಕೆಲಸ,
ಸಾಃ ಕಂಬದಕೋಣ, ಬೋಳಂಬಳ್ಳಿ, ಬೈಂದೂರು

## ದೋಷಾರೋಪಣೆ (Through VC)

ನಾನು ಅರ್ಪಿತಾ ಬಿ. ಬೆಲ್ಲದ್, ಬಿ.ಕಾಂ..,ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುತ್ತಿದ್ದೇನೆ.

ದಿಃ 30-07-2023 ರ ರಾತ್ರಿ 1-08 ಗಂಟೆಗೆ ಅಂಕೋಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ವಂದಿಗೆ ಗ್ರಾಮದಲ್ಲಿ ಆರೋಪಿಯಾದ ನೀವು ಇನ್ನೊಬ್ಬ ಆರೋಪಿಯೊಂದಿಗೆ ಸೇರಿಕೊಂಡು ವಂದಿಗೆ ಗ್ರಾಮದ ರಾಷ್ಟ್ರೀಯ ಹೆದ್ದಾರಿ 66 ರಸ್ತೆಯ ಬದಿಯಲ್ಲಿರುವ ಫಿರ್ಯಾದಿ -ರಾಜೇಶ ಶಿವಾನಂದ ಶೆಟ್ಟಿ ಯವರ ನಿರ್ಮಾಣ ಹಂತದ ಶ್ರೀ ಮಂಜುನಾಥ ಸ್ಟೋರ್ ಅಂಗಡಿಯ ಎದುರುಗಡೆ ನಿಲ್ಲಿಸಿದ್ದ ಫಿರ್ಯಾದಿಯವರ ಆರ್ ಸಿ ಮಾಲೀಕತ್ವದ 10,000/- ರೂಪಾಯಿ ಬೆಲೆಯ ಹೀರೋ ಹೊಂಡಾ ಕಂಪನಿ ಸ್ಪ್ಲೆಂಡರ್ ಮಾದರಿಯ ಮೋಟಾರ ಸೈಕಲ್ ನಂ. ಕೆಎ-30-ಜೆ-1085 ನೇದನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತೀರಿ. ಆ ಮೂಲಕ

ಭಾ.ದಂ.ಸಂ.ಕಲಂ 379 ಕಾಯ್ದೆ ಅಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಾ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

(ಮೇಲಿನ ಅಪರಾಧಗಳನ್ನು ಆರೋಪಿಯಾದ ನೀವು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ನನ್ನ ಸಂಜ್ಞೆಯತೆಯಲ್ಲಿ ಮಾಡಿದ್ದರಿಂದ ಸದರಿ ಅಪರಾಧಿಕ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ 23 ನೇ ಅಕ್ಟೋಬರ್ 2025 ರಂದು ಆದೇಶಿಸುತ್ತೇನೆ.)

Sd/-

ಅಂಕೋಲಾ **(ಅರ್ಪಿತಾ ಬಿ. ಬೆಲ್ಲದ್)**

ದಿನಾಂಕಃ **23-10-2025** **ಪ್ರ ದಂ ನ್ಯಾದಂ, ಅಂಕೋಲಾ.**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರಃ 680/2023

ಪಿರ್ಯಾದಿಃ ಸರಕಾರ- ವಿರುದ್ಧ -ಆರೋಪಿ- 2) ರಂಜೀತ ರಾಮಚಂದ್ರ ಪೂಜಾರಿ

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?
ಉತ್ತರಃ

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?
ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

Sd/-

ಅಂಕೋಲಾ **(ಅರ್ಪಿತಾ ಬಿ. ಬೆಲ್ಲದ್)**

ದಿನಾಂಕಃ **23.10.2025** **ಪ್ರ ದಂ ನ್ಯಾದಂ, ಅಂಕೋಲಾ.**

**ಆರೋಪಿಯ ಸಹಿ**